**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ**

ಸೆಷನ್ಸ್ ಕೇಸ್ ನಂಃ 3/2021 ಪಿ.ಡಬ್ಲ್ಯೂಃ 8

ಸಿ.ಡಬ್ಲ್ಯೂಃ 14

| | |
|---|---|
| ಸಾಕ್ಷಿದಾರರ ಹೆಸರು | ಮೊಹಮದ್ ಹುಸೇನ್ |
| ತಂದೆಯ ಹೆಸರು | ರಶೀದ್ |
| ವಯಸ್ಸು | 30 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಿಳಾಸ | ಎಸ್.ಎಸ್. ರೋಡ್, ಹೆಜಮಾಡಿ |

ದಿನಾಂಕಃ 27-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇದೆ. ಅವರು ನನ್ನ ಪಕ್ಕದ ಮನೆಯಲ್ಲಿ ವಾಸವಾಗಿದ್ದರು. 1 ನೇ ಆರೋಪಿಯ ಗಂಡ ಗೊತ್ತು. ಆತ 2 ನೇ ಅರೋಪಿಯ ಅಣ್ಣ. 5 ವರ್ಷಗಳ ಹಿಂದೆ ಸದಾಕತ್ ಅನ್ಸಾರಿ ತೀರಿದ್ದ. ತಾರೀಕು 23-05-2020 ರಂದು ಪೊಲೀಸರು ಆರೋಪಿತರನ್ನು ದಸ್ತಗಿರಿ ಮಾಡಿದ್ದ ಬಗ್ಗೆ ಗೊತ್ತಿಲ್ಲ. ನಾನು ಆದಿನ ಠಾಣೆಗೆ ಹೋಗಿಲ್ಲ. ಪೊಲೀಸರು ಅವರ ಬಳಿಯಿಂದ ಏನು ಜಪ್ತು ಮಾಡಿದ್ದರು ಎಂದು ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ನನ್ನ ಸಹಿಯನ್ನು ನೋಡಿ ಗುರುತಿಸಬಲ್ಲೆ. ನಿಪಿ-8 ರಲ್ಲಿರುವ ನನ್ನ ಸಹಿ ನಿಪಿ-8(ಬಿ). ನಿಪಿ.8 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಪೊಲೀಸರು ಆರೋಪಿತರನ್ನು ಸದಾಕತ್ ಅನ್ಸಾರಿಯ ಹತ್ಯೆಗೆ ಸಂಬಂಧಿಸಿದಂತೆ ದಸ್ತಗಿರಿ ಮಾಡಿದ್ದರು ಎಂದು ತಿಳಿದಿತ್ತು.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**ಪಾಟಿಸವಾಲುಃ ಸರಕಾರಿ ಅಭಿಯೋಜಕರಿಂದಃ**

1) ತಾರೀಕು 23-05-2020 ರಂದು ಪೊಲೀಸರು ನನ್ನ ಮತ್ತು ಚಾಸಾ-13 ಈತನ ಸಮಕ್ಷಮ ಸಂಜೆಯ 5.30 ರಿಂದ 6.30 ಗಂಟೆಯ ಸಮಯದಲ್ಲಿ

ಆರೋಪಿತರನ್ನು ವಿಚಾರಣೆಗಾಗಿ ಕರೆಯಿಸಿದ್ದರು. ವಿಚಾರಿಸಿದಾಗ, ಆರೋಪಿತರು ಸದಾಕತ್ ಅನ್ಸಾರಿಯ ಸಾವಿನ ಬಗ್ಗೆ ಮಾಹಿತಿ ನೀಡಿದ್ದರು ಎಂದರೆ ಸರಿ. ಆ ಸಮಯದಲ್ಲಿ ಪೊಲೀಸರು ಎರಡು ಮೊಬೈಲ್ ಗಳನ್ನು ಜಪ್ತು ಮಾಡಿದ್ದರು ಎಂದರೆ ಸರಿ. ಅದು ಒಪ್ಪೊ ಮತ್ತು ಎಂ.ಐ ಮೊಬೈಲ್ ಗಳು. ಆ ಮೊಬೈಲ್ ಗಳನ್ನು ನಮ್ಮ ಸಮಕ್ಷಮ ಬಟ್ಟೆಯಿಂದ ಸುತ್ತಿ, ಪ್ಯಾಕ್ ಮಾಡಿ, ಸೀಲು ಮಾಡಿದ್ದರು ಎಂದರೆ ನಿಜ. ಅದಕ್ಕಾಗಿ ನಿಪಿ-8ರ ಪಂಚನಾಮೆಯನ್ನು ಆಗ ಅಲ್ಲಿಯೇ ಬರೆದಿದ್ದರು ಎಂದರೆ ನಿಜ. ಆಗ ಮೊಬೈಲ್ ಗಳ ಪೋಟೋಗಳನ್ನು ತೆಗೆದಿದ್ದರು ಎಂದರೆ ನಿಜ. ಅವು ಈಗ ತೋರಿಸಿದ ಪೋಟೋಗಳು ಎಂದರೆ ನಿಜ. ಅವುಗಳನ್ನು ನಿಶಾನೆ ಪಿ-9 ಎಂದು ಗುರುತಿಸಿದೆ.

2) ಸದರಿ ಪಂಚನಾಮೆಯಾಗಿ 5 ವರ್ಷಗಳು ಅಗಿದ್ದರಿಂದ ನನಗೆ ಈ ಮೊದಲು ಸರಿಯಾದ ಮಾಹಿತಿ ಹೇಳಲು ಆಗಿಲ್ಲ ಎಂದರೆ ನಿಜ.

**<u>ಪಾಟೀಸವಾಲು: ಶ್ರೀ ಪಿ.ಪಿ.ಜೆ ವಕೀಲರಿಂದ ಆರೋಪಿತರ ಪರವಾಗಿ</u>**

1) ನಿಪಿ-8ಕ್ಕಾಗಿ ನನಗೆ ಪೊಲೀಸರು ನೋಟಿಸು ಕೊಟ್ಟಿಲ್ಲ. ನಾನು ಈಗ ಬೆಳ್ತಂಗಡಿಯಲ್ಲಿ ವಾಸವಾಗಿದ್ದೇನೆ. ನಿಪಿ-9ರ ಮೊಬೈಲ್ ಗಳು ನಾನು ಹೋದಾಗ ಪೊಲೀಸರ ಬಳಿಯಲ್ಲಿ ಇತ್ತು ಎಂದರೆ, ಅವುಗಳನ್ನು ಅಲ್ಲಿ ಇಟ್ಟಿದ್ದರು. ಆದಿನ ನನ್ನೊಂದಿಗೆ ಚಾಸಾ-13 ಸಹ ಇದ್ದರು. ನಿಪಿ-9ರ ಮೊಬೈಲ್ ಗಳನ್ನು ಯಾರು ತಂದಿದ್ದರು ಎಂದು ಗೊತ್ತಿಲ್ಲ. ನಾನು ಆರೋಪಿತರಿಗೆ ತೊಂದರೆ ಕೊಡಲು ಒಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೇ ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಏನನ್ನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ - ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ